**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1100 |
| ಸದಸ್ಯರ ಹೆಸರು | ಶ್ರೀಮತಿ ಹೇಮಲತಾ ನಾಯಕ್ |
| ಉತ್ತರಿಸುವ ದಿನಾಂಕ | 18.12.2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮುಜರಾಯಿ ಇಲಾಖೆಯ ದೇವಾಲಯಗಳು ಕರ್ನಾಟಕದಲ್ಲಿ ಹೊಂದಿರುವ ಒಟ್ಟು ಭೂಮಿ (ಚರಾಸ್ತಿ) ಎಷ್ಟು? ಎಲ್ಲಾ ದೇವಾಲಯಗಳ ಭೂಮಿ ಮಾಹಿತಿಯೂ ಸರ್ಕಾರದ ಬಳಿ ಇದೆಯೇ? ಇಲ್ಲದಿದ್ದಲ್ಲಿ ಕಾರಣವೇನು? | i. ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಗೆ ರಾಜ್ಯದ ಒಟ್ಟು 34563 ದೇವಸ್ಥಾನಗಳು ಒಳಪಟ್ಟಿರುತ್ತವೆ. ಇಲಾಖಾ ದೇವಸ್ಥಾನಗಳನ್ನು ಆಯಾ ದೇವಾಲಯಗಳ ಆದಾಯಕ್ಕನುಗುಣವಾಗಿ ಪ್ರವರ್ಗ 'ಎ' 'ಬಿ'ಮತ್ತು 'ಸಿ' ದೇವಾಲಯಗಳೆಂದು ವರ್ಗೀಕರಿಸಲಾಗಿದೆ. |

| ಪ್ರವರ್ಗ | ವಿವರ | ಸಂಸ್ಥೆಗಳ ಸಂಖ್ಯೆ | ನಿಯಮಿಸಲಾದ ಪ್ರಾಧಿಕಾರಿಗಳು |
|---|---|---|---|
| ಎ | ವಾರ್ಷಿಕ ವರಮಾನವು ರೂ. ಇಪ್ಪತ್ತೈದು ಲಕ್ಷಗಳನ್ನು ಮೀರಿದ ಸಂಸ್ಥೆಗಳು | 205 | ಆಯುಕ್ತರು |
| ಬಿ | ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರಿ ರೂ. ಇಪ್ಪತ್ತೈದು ಲಕ್ಷಗಳನ್ನು ಮೀರದ ಸಂಸ್ಥೆಗಳು | 193 | ಜಿಲ್ಲಾಧಿಕಾರಿಗಳು |
| ಸಿ | ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರದ ಸಂಸ್ಥೆಗಳು | 34165 | ಉಪ ವಿಭಾಗಾಧಿಕಾರಿಗಳು |
| | ಒಟ್ಟು | **34563** | |

ii. ಇಲಾಖೆಯ ವ್ಯಾಪ್ತಿಯಲ್ಲಿ ಪ್ರವರ್ಗ 'ಎ' 205 ದೇವಾಲಯಗಳು ಪ್ರವರ್ಗ 'ಬಿ' 193 ದೇವಾಲಯಗಳು ಮತ್ತು ಪ್ರವರ್ಗ 'ಸಿ' 34,165 ದೇವಾಲಯಗಳು ಇದ್ದು ಈ ದೇವಾಲಯಗಳ ಸಾವಿರಾರು ಎಕರೆ ಭೂಮಿಯು ಇನಾಂ ರದ್ದಿಯಾತಿ ಕಾಯ್ದೆ ಮತ್ತು ಭೂಸುಧಾರಣಾ ಕಾಯ್ದೆಯಡಿಯಲ್ಲಿ ಪರಭಾರೆಯಾಗಿರುತ್ತವೆ. ಸದರಿ 'ಬಿ' ಮತ್ತು 'ಸಿ' ವರ್ಗದ ದೇವಾಲಯಗಳ ಸ್ವತ್ತುಗಳಿಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಹಾಗೂ ತಾಲ್ಲೂಕು ತಹಶೀಲ್ದಾರ್ ರವರೇ ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ. ಅಲ್ಲದೆ ಭೂ ನ್ಯಾಯ ಮಂಡಳಿಯ ಅಧ್ಯಕ್ಷರು ಸಂಬಂಧಪಟ್ಟ ಉಪವಿಭಾಗದ ಉಪ ವಿಭಾಗಾಧಿಕಾರಿ / ಸಹಾಯಕ ಆಯುಕ್ತರು ಆಗಿದ್ದು, ಕಂದಾಯ ಇಲಾಖೆ ತಾಲ್ಲೂಕು ತಹಶೀಲ್ದಾರ್ ರವರು ಸದಸ್ಯ ಕಾ ರ್ಯದರ್ಶಿಯಾಗಿರುತ್ತಾರೆ.

iii. ಕರ್ನಾಟಕ ರಾಜ್ಯಪತ್ರ ಅಧಿಸೂಚನೆ ಸಂಖ್ಯೆ: ಸಂವ್ಯಶಾ 52 ಶಾಸನ 2021, ಬೆಂಗಳೂರು, ದಿನಾಂಕ:18.01.2022 ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದಿಂದ ಒಂದು ವರ್ಷದೊಳಗಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ದೇವಾಲಯಕ್ಕೆ ಸೇರಿರುವ ಮತ್ತಷ್ಟು ಇನಾಂ ಜಮೀನುಗಳು

| | | |
|---|---|---|
| | | ರೀಗ್ರ್ಯಾಂಟ್ ಆಗುವ ಸಾಧ್ಯತೆ ಇದೆ.<br>iv. ಪ್ರಸ್ತುತ ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಅಧೀನಕ್ಕೆ ಒಳಪಟ್ಟಿರುವ ಪ್ರವರ್ಗ "ಎ" ಮತ್ತು "ಬಿ" ಅಧಿಸೂಚಿತ ದೇವಸ್ಥಾನ/ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಮತ್ತು ದೇವಾಲಯಗಳ ಕಾರ್ಯ ನಿರ್ವಾಹಕ ಅಧಿಕಾರಿಯವರು ನವೆಂಬರ್ 2024ರ ಅಂತ್ಯಕ್ಕೆ ಸಲ್ಲಿಸಿರುವ ಸ್ಥಿರಾಸ್ತಿಯ ಮಾಹಿತಿಯಂತೆ ಪ್ರವರ್ಗ "ಎ" 205 ದೇವಾಲಯಗಳ ಒಟ್ಟು ಸ್ಥಿರಾಸ್ತಿ ಅಂದಾಜು ವಿಸ್ತೀರ್ಣ 6503-18 (ಎಕರೆ-ಗುಂಟೆ), ಪ್ರವರ್ಗ "ಬಿ" 193 ದೇವಾಲಯಗಳ ಒಟ್ಟು ಸ್ಥಿರಾಸ್ತಿ ಅಂದಾಜು ವಿಸ್ತೀರ್ಣ 2156-2.25 (ಎಕರೆ-ಗುಂಟೆ) ಹಾಗೂ ಪ್ರವರ್ಗ "ಸಿ" 34,165 ದೇವಾಲಯಗಳ ಒಟ್ಟು ಸ್ಥಿರಾಸ್ತಿ ಅಂದಾಜು ವಿಸ್ತೀರ್ಣ 28041-1.75 (ಎಕರೆ-ಗುಂಟೆ) ಇರುತ್ತದೆ. ಸದರಿ ಜಿಲ್ಲಾವಾರು, ದೇವಾಲಯವಾರು ಮಾಹಿತಿಯನ್ನು **ಸಿ.ಡಿ** ಯಲ್ಲಿ ಒದಗಿಸಿದೆ.<br><br>ಅಧಿಸೂಚಿತ ದೇವಾಲಯಗಳು ಹೊಂದಿರುವ ಆಸ್ತಿಯ ಬಾಬ್ತು ಇನಾಂ ಜಮೀನುಗಳ ಪಹಣಿಗಳಲ್ಲಿ ಮಂಜೂರಾತಿಗಳನ್ನು ಇಂಡೀಕರಿಸಿ ದೇವಾಲಯಕ್ಕೆ ಉಳಿದಿರುವ ಜಮೀನುಗಳ ಬಾಬ್ತು ಜಿಲ್ಲಾಧಿಕಾರಿಗಳು ಅಧಿಸೂಚನೆ ಹೊರಡಿಸಿದ ನಂತರದಲ್ಲಿ ಸ್ಪಷ್ಟ ಹಾಗೂ ನಿಖರ ಮಾಹಿತಿ ಲಭ್ಯವಾಗಲಿದ್ದು. ಪ್ರಸ್ತುತ ಜಿಲ್ಲಾಧಿಕಾರಿಗಳು ಹಾಗೂ ದೇವಾಲಯಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಕಳುಹಿಸಿರುವ ದೇವಾಲಯದ ಸ್ಥಿರಾಸ್ತಿಯ ಮಾಹಿತಿಯನ್ನು **ಸಿ.ಡಿ.ಯಲ್ಲಿ** ಒದಗಿಸಿದೆ. |
| ಆ) | ದೇವಾಲಯದ ಭೂಮಿಯನ್ನು ಯಾರಿಗೇ ಆಗಲಿ ಪರಭಾರೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ ಸರ್ಕಾರ ಈ ಕುರಿತು ಏನು ಕ್ರಮ ಕೈಗೊಳ್ಳುತ್ತಿದೆ; ಎಷ್ಟು ವರ್ಷದ ಹಿಂದೆ ಪರಭಾರೆ ಮಾಡಿದ ದೇವಸ್ಥಾನದ ಭೂಮಿಯನ್ನು ಸರ್ಕಾರ ಮರಳಿ ಪಡೆಯಲಿದೆ; | ಬೆಳಗಾವಿ ವಿಭಾಗ, ಮೈಸೂರು ವಿಭಾಗ, ಕಲಬುರಗಿ ವಿಭಾಗ ಹಾಗೂ ಬೆಂಗಳೂರು ವಿಭಾಗಗಳಲ್ಲಿ ಇಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ. |
| ಇ) | ಪರಭಾರೆ ಮಾಡಿದ ಭೂಮಿ ಈಗಾಗಲೇ ಬೇರೆಯವರಿಗೆ ಮಾರಾಟವಾಗಿದ್ದರೆ ಅದನ್ನು ಸರ್ಕಾರ ಹೇಗೆ ವಶಕ್ಕೆ ಪಡೆಯಲಿದೆ; | ಅನ್ವಯಿಸುವುದಿಲ್ಲ. |
| ಈ) | ದೇವಸ್ಥಾನದ ಎಲ್ಲಾ ಆಸ್ತಿಯನ್ನು ಆನ್ ಲೈನ್ ನಲ್ಲಿ ದಾಖಲಿಸುವ ಹಾಗೂ ಸಾರ್ವಜನಿಕರ ವೀಕ್ಷಣೆಗೆ ನೀಡುವ ಆಲೋಚನೆಯನ್ನು ಸರ್ಕಾರ ಹೊಂದಿದೆಯೇ; ಇದ್ದಲ್ಲಿ ಅದು ಯಾವ ಹಂತದಲ್ಲಿದೆ; ದತ್ತಾಂಶ ಅಳವಡಿಕೆ ಸಂಪೂರ್ಣವಾಗಿದೆಯೇ?(ಮಾಹಿತಿ ನೀಡುವುದು) | ಅಧಿಸೂಚಿತ ದೇವಸ್ಥಾನಕ್ಕೆ ಸೇರಿದ ಸ್ಥಿರ ಸ್ವತ್ತುಗಳ ನಿರ್ವಹಣೆ ಸಂಬಂಧ ಪಾರದರ್ಶಕತೆಯನ್ನು ಕಾಯ್ದು ಕೊಳ್ಳುವ ಉದ್ದೇಶದಿಂದ ಇಲಾಖೆಯಲ್ಲಿ ಕೇಂದ್ರ ಸರ್ಕಾರದ ಎನ್.ಐ.ಸಿಯ ಮೂಲಕ ಆನ್ ಲೈನ್ ತಂತ್ರಾಂಶ (INTEGRATED TEMPLE MANAGEMENT SYSTEM / ITMS)ವನ್ನು ಜಾರಿಗೆ ತರಲಾಗಿದೆ. ಕರ್ನಾಟಕ ರಾಜ್ಯ ಪತ್ರದಲ್ಲಿ ದೇವಾಲಯದ ಸ್ಥಿರಾಸ್ತಿಯು ಪ್ರಕಟವಾದ ನಂತರ ಸದರಿ ತಂತ್ರಾಂಶದಲ್ಲಿ ಹಂತ ಹಂತವಾಗಿ ದೇವಾಲಯಗಳ ಸ್ಥಿರಾಸ್ತಿ ಮತ್ತು ಚರಾಸ್ತಿಗಳ ಮಾಹಿತಿ ಮತ್ತು ಅವುಗಳ ನಿರ್ವಹಣೆಗೆ ಸಂಬಂಧಿಸಿದಂತೆ ಮಾಡ್ಯೂಲ್ ಗಳನ್ನು ಅಭಿವೃದ್ಧಿಪಡಿಸಿ ಜಾರಿಗೆ ತರಲು ಕ್ರಮ ಕೈಗೊಳ್ಳಲಾಗಿದೆ. |

ಸಂಖ್ಯೆ: ಕಂಇ 180 ಮುಸಪ್ರ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು